**ಇಂದು ದಿನಾಂಕಃ 26-03-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು 2 ನೇ ಪ್ರತಿವಾದಿ ಪರವಾಗಿ ಶ್ರೀ ಸಿ.ಎಸ್. ವಕೀಲರಿಂದಃ-</u>**

ನಾನು 2 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ತಹಶೀಲ್ದಾರ ಕಛೇರಿಯಲ್ಲಿ ಆರ್.ಟಿ.ಸಿ ಎಂಟ್ರಿ ಆಪರೇಟರ ಆಗಿ 3 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನನಗಿಂತ ಮೊದಲು ಸದರಿ ಕೆಲಸದಲ್ಲಿ ನನ್ನ ಗಂಡ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ಗಂಡ ಮೃತಪಟ್ಟ ಕಾರಣ ಸದರಿ ಕೆಲಸ ನನಗೆ ಸಿಕ್ಕಿರುತ್ತದೆ ಎಂದರೆ ಸರಿ.

ನನ್ನ ಮಾವನ ತಂದೆಗೆ 3 ಜನ ಗಂಡು ಮಕ್ಕಳು ಮತ್ತು 2 ಹೆಣ್ಣು ಮಕ್ಕಳು. ಗಂಡು ಮಕ್ಕಳ ಹೆಸರು ನಂದಿಕುಮಾರ, ಶಿವಶಂಕರ ಮತ್ತು ಹರಿಶಂಕರ. ಹೆಣ್ಣು ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ನನ್ನ ಮಾವನ ತಂದೆ ಹೆಸರು ಶಂಕರಪ್ಪ ಹಾಗೂ ತಾಯಿ ಹೆಸರು ಬಸಮ್ಮ. ನನ್ನ ಮಾವನ ತಂದೆಯ ಮೊದಲನೇ ಹೆಣ್ಣು ಮಗಳು ಶೇಕಮ್ಮ ಇನ್ನೊಬ್ಬರು ಅನ್ನಪೂರ್ಣದೇವಿ ಹಾಗೂ ಇನ್ನೊಬ್ಬರು ಶಾಂತಾ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮಾವನ ಅಣ್ಣನ ಹೆಸರು ನಂದಿಕುಮಾರರವರ ಮಕ್ಕಳು ಪ್ರತಿವಾದಿಯರು ಇರುತ್ತಾರೆ ಎಂದರೆ ಸರಿ. ನನ್ನ ಮಾವನಿಗೆ ಮೂರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಇರುತ್ತಾಳೆ. ಅವರು ಹೆಸರು ಗೀತಾ, ಶಂಕರಲಿಂಗ, ಸಂಜುಕುಮಾರ ಹಾಗೂ ರಾಜಕುಮಾರ. ಅವರಲ್ಲಿ ಶಂಕರಲಿಂಗ ಹಾಗೂ ನನ್ನ ಗಂಡ ಮೃತಪಟ್ಟಿರುತ್ತಾರೆ. ಶಂಕರಲಿಂಗರವರಿಗೆ ಮದುವೆಯಾಗಿರಲಿಲ್ಲ ಮತ್ತು ಚಿಕ್ಕವರಿದ್ದಾಗ ಮೃತಪಟ್ಟಿದ್ದಾರೆ ಎಂದರೆ ಸರಿ. ಈ ದಿನ ನ್ಯಾಯಾಲಯಕ್ಕೆ ನನ್ನ ಮಾವ ಹರಿಶಂಕರ ಹಾಗೂ ಅವರ ಮಗಳ ಗೀತಾರವರು ಬಂದಿದ್ದಾರೆ ಎಂದರೆ ಸರಿ. ಈ ದಾವೆಯದಲ್ಲಿ ಗೀತಾರವರಿಗೆ ಪಕ್ಕಗಾರರನ್ನಾಗಿ ಸೇರಿಸಿಲ್ಲ ಎಂದರೆ ಸಾಕ್ಷಿ ಸೇರಿಸಬೇಕಾದರೆ ಸೇರಿಸುತ್ತೇನೆ ಎಂದು ನುಡಿಯುತ್ತಾರೆ.

ನನ್ನ ಕುಟುಂಬದ ಬಗ್ಗೆ ನನ್ನ ವಕೀಲರಿಗೆ ಹೇಳಿದ್ದೇನೆ ಮತ್ತು ಪ್ರತಿ ದಿನಾಂಕದಂದು ಗೀತಾರವರು ನಮ್ಮ ಜೊತೆ ನ್ಯಾಯಾಲಯಕ್ಕೆ ಬರುತ್ತಾರೆ ಎಂದರೆ ಸರಿ. ಯಾವ ಕಾರಣಕ್ಕಾಗಿ ಗೀತಾರವರಿಗೆ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸಾಕ್ಷಿ ಗೊತ್ತಾಗಿಲ್ಲ ಮುಂದೆ ಸೇರಿಸು ಎಂದರೆ ಸೇರಿಸುತ್ತೇನೆ ಎಂದು ನುಡಿಯುತ್ತಾರೆ.

ನನ್ನ ವಾದ ಪತ್ರವನ್ನು ನಾನು ಹೇಳಿ ಬರೆಸಿದ್ದೇನೆ ಎಂದರೆ ಸರಿ. ವಾದ ಪತ್ರದ ಸಂಗತಿಗಳು ನನಗೆ ಗೊತ್ತಿದೆ. ನನ್ನ ಮುಖ್ಯ ವಿಚಾರಣೆಯ ಶಪತ ಪತ್ರವನ್ನು ಸಹ ನಾನೇ ಹೇಳಿ ಬರೆಸಿದ್ದೇನೆ. ನನ್ನ ಶಪತ ಪತ್ರದಲ್ಲಿ ಹರಿಶಂಕರರವರು ದೇಶಾಂತರ ಹೋಗಿದ್ದಾರೆ ಎಂದು ಬರೆಸಿದ್ದೇನೆ ಹಾಗಾಗಿ ದೇಶಾಂತರ ಎಂದರೆ ಏನು ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಗೊತ್ತಿಲ್ಲದಂತೆ ಹರಿಶಂಕರರವರು ಹೋಗಿದ್ದಾರೆ ಎಂದು ನುಡಿಯುತ್ತಾರೆ. ದೇಶಾಂತರ ಹೊಗಿದ್ದಾರೆ ಎಂದರೆ ಕಾಣೆಯಾಗಿದ್ದಾರೆ ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಕಾಣೆಯಾದರೆ ಯಾವ ಕ್ರಮ ಕೈಗೊಳ್ಳಬೇಕು ಎಂದು ನನಗೆ ಗೊತ್ತು. ನಿಮ್ಮ ಮಾವ ಕಾಣೆಯಾಗಿರುವ ಬಗ್ಗೆ ದೂರು ಸಲ್ಲಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ 4-5 ಬಾರಿ ಸಲ್ಲಿಸಲು ಹೋಗಿರುತ್ತೇವೆ ಆದರೆ ಪೋಲಿಸರು ನಮ್ಮ ದೂರು ಪಡೆದಿಲ್ಲ ಎಂದು ನುಡಿಯುತ್ತಾರೆ. ದೂರು ಪಡೆದಿಲ್ಲ ಎಂದು ತೋರಿಸಲು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಯಾವುದಾದರೂ ಪತ್ರಿಕೆಯಲ್ಲಿ ನನ್ನ ಮಾವ ಕಾಣೆಯಾಗಿರುವ ಬಗ್ಗೆ ಪ್ರಕಟಣೆ ಸಲ್ಲಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಇನ್ನು ಮುಂದೆ ಪ್ರಕಟಿಸ ಬೇಕು ಎಂದು ನುಡಿಯುತ್ತಾರೆ. ಯಾವುದಾದರೂ ಬಸ್ ನಿಲ್ದಾಣ ಅಥವಾ ಪ್ರಮುಖ ಸ್ಥಳದಲ್ಲಿ ಭಾವಚಿತ್ರ ಅಂಟಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಇನ್ನು ಮುಂದು ಅಂಟಿಸಬೇಕು ಎಂದು ನುಡಿಯುತ್ತಾರೆ. ನನ್ನ ಮಾವ ಕಾಣೆಯಾಗಿರುವುದಿಲ್ಲ ಮತ್ತು

ಕಾಣೆಯಾಗಿರುವ ಬಗ್ಗೆ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾವನ ವಾರಸುದ್ದಾರರು ನಾವು ಇರುತ್ತೇವೆ ಎಂದು ನ್ಯಾಯಾಲಯಕ್ಕೆ ದಾಖಲೇ ಹಾಜರು ಪಡಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಅದರ ಬಗ್ಗೆ ಗೊತ್ತಿಲ್ಲ ಗೊತ್ತಾದರೆ ಪಡೆಯುತ್ತೇನೆ ಎಂದು ನುಡಿಯುತ್ತಾರೆ.

ಇದೇ ನ್ಯಾಯಾಲಯದಲ್ಲಿರುವ ಅಸಲು ದಾವೆ ಸಂಖ್ಯೆ 83/2020 ರಲ್ಲಿ ಈ ದಿನ ಹಾಜರು ಆಗಿದ್ದೆ ಎಂದರೆ ಸರಿ. ಸದರಿ ದಾವೆ ವಿಮಲಾಬಾಯಿರವರು ಸಲ್ಲಿಸಿದ್ದಾರೆ ಎಂದರೆ ಸರಿ. ಈ ದಾವೆ ಸಲ್ಲಿಸುವ ಮೊದಲು ಅಸಲು ದಾವೆ ಸಂಖ್ಯೆ 83/2020 ರಲ್ಲಿ ವಿಮಲಾಬಾಯಿರವರು ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ತಕರಾರು ಸಲ್ಲಿಸಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರು ಇರುವುದಿಲ್ಲ ಅವರು ಬಂದ ಮೇಲೆ ಸಲ್ಲಿಸುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾವೆ ಮತ್ತು ಈ ದಾವೆ ಒಂದೇ ದಿನಾಂಕದಂದು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಿಮಲಬಾಯಿರವರಿಗೆ ನಾನು ನ್ಯಾಯಾಲಯದಲ್ಲಿ ನೋಡುತ್ತಾ ಬಂದಿರುತ್ತೇನೆ. ನೀವು ವಿಮಲಾಬಾಯಿರವರೊಂದಿಗೆ ಮಾತನಾಡುತ್ತಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನ್ಯಾಯಾಲಯದಲ್ಲಿ ಸಿಕ್ಕಾಗ ಮಾತನಾಡುತ್ತೇವೆ ಎಂದು ನುಡಿಯುತ್ತಾರೆ. ವಿಮಲಬಾಯಿರವರ ವಕೀಲರು ಮತ್ತು ನಮ್ಮ ವಕೀಲರು ಅಗ್ನಿಹೋತ್ರಿರವರು ಇರುತ್ತಾರೆ ಎಂದರೆ ಸಾಕ್ಷಿ ನಮ್ಮ ವಕೀಲರು ಅವರು ಇದ್ದು ವಿಮಲಾಬಾಯಿರವರ ವಕೀಲರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಿಮಲಬಾಯಿರವರ ವಕೀಲರು ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಿಮಲಬಾಯಿರವರು ಏನು ದಾವೆ ಹೂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಿಮಲಬಾಯಿರವರು ತಮ್ಮ ಜಮೀನನ್ನು 1 ಮತ್ತು 2 ನೇ ಪ್ರತಿವಾದಿ ಹಾಗೂ ಅವರ ಸಹೋದರರು ಒತ್ತುವರಿ ಮಾಡುತ್ತಿದ್ದಾರೆ ಎಂದು ದಾವೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಅದು ನಮ್ಮ ಜಮೀನು ಇದೆ ಎಂದು ನುಡಿಯುತ್ತಾರೆ. ವಿಮಲಬಾಯಿರವರ ದಾವೆಯಲ್ಲಿ ನಾನು ಮಾಲೀಕಳಿದ್ದೇನೆ ಎಂದು ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸಾಕ್ಷಿ ಸದರಿ ದಾವೆಯಲ್ಲಿ ನೋಟಿಸ ಸ್ವಲ್ಪ ದಿನಗಳ ಹಿಂದೆ ಬಂದಿದೆ ಎಂದು ನುಡಿಯುತ್ತಾರೆ. ನನ್ನ ಅತ್ತೆ ಹಾಗೂ ನನಗೆ ಸದರಿ ದಾವೆಯ ಬಗ್ಗೆ ಮಾಹಿತಿ ಇದ್ದರು ಸಹ ಇಲ್ಲಿಯವರೆಗೆ ತಕರಾರು ಸಲ್ಲಿಸಿಲ್ಲ ಎಂದರೆ ಸಾಕ್ಷಿ ಇನ್ನು ಮುಂದೆ ಸಲ್ಲಿಸುತ್ತೇವೆ ಎಂದು ನುಡಿಯುತ್ತಾರೆ.

ಯಾವ ಆದಾರದ ಮೇಲೆ ನೀವು ಜಮೀನಿನ ಮಾಲೀಕರು ಎಂದು ಹೇಳುತ್ತಿರಾ ಎಂದು

ಪ್ರಶ್ನಿಸಿದಾಗ ಸಾಕ್ಷಿ ಮೊದಲಿನಿಂದ ಜಮೀನಿನ ಪಹಣಿ ನಮ್ಮ ಮಾವನ ಹೆಸರಿನಲ್ಲಿದ್ದು ಮತ್ತು ಈಗ ನಾವು ಸಾಗುವಳಿ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಜಮೀನು ನನ್ನ ಮಾವ ಖರೀದಿ ಮಾಡಿದ ಆಸ್ತಿ ಅಲ್ಲ ಎಂದರೆ ಸಾಕ್ಷಿ ನನ್ನ ಮಾವನ ತಂದೆಯಿಂದ ಬಂದಿರುವ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಜಮೀನು ನಮ್ಮ ಮಾವನ ತಂದೆಯಾದ ಶಂಕರಪ್ಪರವರ ಆಸ್ತಿ ಎಂದರೆ ಸರಿ. ನನ್ನ ಮಾವನ ತಂದೆಯಾದ ಶಂಕರಪ್ಪರವರಿಗೆ ಯಾವ ಸರ್ವೇ ನಂಬರಗಳಲ್ಲಿ ಎಷ್ಟು ಆಸ್ತಿ ಇತ್ತು ಎಂದು ಪ್ರಶ್ನಿಸಿದಾಗ ಸಾಕ್ಷಿ ಸರ್ವೇ ನಂಬರ ಗೊತ್ತಿಲ್ಲ ಒಟ್ಟು 69 ಎಕರೆ ಜಮೀನು ಇತ್ತು ಎಂದು ನುಡಿಯುತ್ತಾರೆ. 69 ಎಕರೆ ಬಿಟ್ಟು ಬೇರೆ ಯಾವುದೇ ಜಮೀನು ಇಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಗೊತ್ತಿರುವ ಪ್ರಕಾರ 69 ಎಕರೆ ಇದೆ ಎಂದು ನುಡಿಯುತ್ತಾರೆ.

ನಮ್ಮ ಮಾವನ ಅಣ್ಣ ತಮ್ಮಂದಿರು ಬೇರೆಯಾಗಿ ಸುಮಾರು 45-50 ವರ್ಷಗಳಾಗಿವೆ. ಬೇರೆಯಾದಾಗ ನನ್ನ ಮಾವನ ಅಣ್ಣ ತಮ್ಮಂದಿರಿಗೆ ಎಷ್ಟು ಪಾಲು ಬಂದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಮೊದಲು ಗೊತ್ತಿಲ್ಲ ಎಂದು ಹೇಳಿ ನಂತರ ತಲಾ 23 ಎಕರೆ ಬಂದಿದ್ದೆ ಎಂದು ನುಡಿಯುತ್ತಾರೆ. ಈ ರೀತಿ ತಲಾ 23 ಎಕರೆ ಪಾಲು ಆದ ಬಗ್ಗೆ ದಾಖಲೆ ಇದೆಯೇ ಪ್ರಶ್ನಿಸಿದಾಗ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಇನ್ನು ಮುಂದು ಸಲ್ಲಿಸುತ್ತೇನೆ ಎಂದು ನುಡಿಯುತ್ತಾರೆ.

ನನ್ನ ಮದುವೆಯಾಗಿ 12 ವರ್ಷಗಳಿಗಿಂತ ಹೆಚ್ಚಾಗಿದೆ. ನಾನು ಪ್ರೀತಿಸಿ ಮದುವೆಯಾಗಿದ್ದೇನೆ ಎಂದರೆ ಸರಿ. ಮದುವೆಯಾದ ನಂತರ ನಾನು ಮತ್ತು ನನ್ನ ಗಂಡ ನನ್ನ ಅತ್ತೆ ಮಾವಂದಿರ ಜೊತೆ ಇರಲಿಲ್ಲ ಎಂದರೆ ಸಾಕ್ಷಿ ನಾವು ಒಟ್ಟಿಗೆ ಇದ್ದೇವು ಎಂದು ನುಡಿಯುತ್ತಾರೆ. ನಾನು ನನ್ನ ತಂದೆ ತಾಯಿ ಹತ್ತಿರ ವಾಸವಿದ್ದೇನೆ ಎಂದು ಪ್ರಶ್ನಿಸಿದಾಗ ಸಾಕ್ಷಿ ನನ್ನ ಅತ್ತೆ ಜೊತೆ ಇದ್ದು ನನ್ನ ಅತ್ತೆ ತಾಂಡಗೆ ಹೊದ ನಂತರ ನನ್ನ ತಂದೆ ತಾಯಿ ಜೊತೆ ವಾಸವಿದ್ದೇನೆ ಎಂದು ನುಡಿಯುತ್ತಾರೆ. ನಾನು ನನ್ನ ತಂದೆ ಮಾವಂದಿರ ಜೊತೆ ಯಾವತ್ತು ಒಟ್ಟಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಮದುವೆಯಾದಾಗಿನಿಂದ ನಾನು ತಂದೆ ತಾಯಿ ಜೊತೆ ವಾಸವಿದ್ದ ಕಾರಣ ನನಗೆ ನನ್ನ ಗಂಡನ ಕುಟುಂಬದ ಹಾಗೂ ಆಸ್ತಿಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ನನ್ನ ಮಾವನ ಸಹೋದರರು ಪಾಲು ವಿಭಾಗ ಮಾಡಿಕೊಂಡಾಗ ನಂದಿಕುಮಾರರವರಿಗೆ 31 ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಶಿವಶಂಕರರವರಿಗೆ 23 ಎಕರೆ

ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಾವನಾದ ಹರಿಶಂಕರವರಿಗೆ 18 ಎಕರೆ ಬಂದಿರುತ್ತದೆ ಎಂದರೆ ಸಾಕ್ಷಿ 23 ಎಕರೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪಾಲುಗಾರಿಕೆ ಫಲವತ್ತತೆ ಆದಾರದ ಮೇಲೆ ಆಗಿದೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಪಾಲುಗಾರಿಕೆಯಾಗಿದೆ ಎಂದು ನನ್ನ ಮಾವನಾದ ಹರಿಶಂಕರರವರು ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಮಾವ ನನ್ನ ಅತ್ತೆಗೆ ಉಪಜೀವನಕ್ಕಾಗಿ 6 ಎಕರೆ ಜಮೀನು ನೀಡಿದ್ದರು ಎಂದರೆ ಸರಿ. ಸದರಿ ಜಮೀನು ಈ ದಾವಾ ಜಮೀನು ಎಂದರೆ ಸರಿಯಲ್ಲ. ಸದರಿ ಜಮೀನು ಉಪಜೀವನಕ್ಕಾಗಿ ನನ್ನ ಅತ್ತೆಗೆ ನೀಡಿದ್ದು ಮತ್ತು ಪ್ರತಿವಾದಿಗಳು ಸರಿಯಾರಿ ಪಾಲು ಆಗಿರುವುದಿಲ್ಲ ಎಂದು ಹೇಳಿದ ಕಾರಣ ಸದರಿ ಜಮೀನು ಪ್ರತಿವಾದಿಗಳಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಮಾವನ ತಾಯಿಯಾದ ಬಸಮ್ಮರವರಿಗೆ ನಾನು ನೋಡಿಲ್ಲ ಎಂದರೆ ಸರಿ. ಬಸಮ್ಮರವರು ಯಾವಾಗ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಮದುವೆಯಾಗುಕ್ಕಿಂತ ಮುಂಚೆ ಚಿಂಚೋಳಿಯಲ್ಲಿ ವಾಸವಿದ್ದು ಈಗಲೂ ಸಹ ಚಿಂಚೋಳಿಯಲ್ಲಿ ವಾಸವಿದ್ದೇನೆ ಎಂದರೆ ಸರಿ. ಬಸಮ್ಮ ಮೃತಪಟ್ಟ ನಂತರ ಬಸಮ್ಮನ ಶವವಿಟ್ಟು ಪಂಚಾಯಿತಿಯಾದ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಂದಿಕುಮಾರರವರ ಮಕ್ಕಳು ಯಾವಾಗ ಪಾಲು ಆದ ಬಗ್ಗೆ ನನಗೆ ಗೊತ್ತಿಲ್ಲ. 1999 ರಿಂದ ಇಲ್ಲಿಯವರೆಗೆ ನಂದಿಕುಮಾರವರ ಮಕ್ಕಳು ದಾವಾ ಜಮೀನಿನ ಮಾಲೀಕರು ಮತ್ತು ಕಬ್ಜದಾರರು ಇರುತ್ತಾರೆ ಎಂದರೆ ಸರಿಯಲ್ಲ.

ಈ ದಾವೆಯನ್ನು 1 ಮತ್ತು 2 ನೇ ಪ್ರತಿವಾದಿ ಮಾತ್ರ ಪ್ರತಿವಾದ ಪತ್ರ ಸಲ್ಲಿಸಿದ್ದು ಉಳಿದ ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಿಮಲಾಬಾಯಿರವರು ತನ್ನ ದಾವೆಯನ್ನು 1, 2 ಪ್ರತಿವಾದಿ ಹಾಗೂ ನನ್ನ ವಿರುದ್ದ ಸಲ್ಲಿಸಿದ್ದಾಳೆ ಮತ್ತು 3 ಮತ್ತು 4 ನೇ ಪ್ರತಿವಾದಿಯ ವಿರುದ್ದ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನನಗೆ ಸ್ವಲ್ಪ ದಿನಗಳ ಹಿಂದೆ ನೋಟಿಸ ಬಂದಿರುತ್ತದೆ ಎಂದು ನುಡಿಯುತ್ತಾರೆ. ವಿಮಲಾಬಾಯಿರವರು 1 ಮತ್ತು 2 ನೇ ಪ್ರತಿವಾದಿಯರು ಮಾಲೀಕರು ಇದ್ದಾರೆ ಎಂದು ಗೊತ್ತಿದ್ದ ಕಾರಣ ಅವರಿಗೆ ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ಸದಾಶಿವರವರ ಮಕ್ಕಳಿಗೆ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ನನಗೆ ತಕರಾರು ಮಾಡಿದರ ವಿರುದ್ದ ಮಾತ್ರ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಜಮೀನಿನಲ್ಲಿ 1 ನೇ

ಪ್ರತಿವಾದಿ ಮಾತ್ರ ಮಾಲೀಕ ಮತ್ತು ಕಬ್ಜದಾರರು ಎಂದರೆ ಸರಿಯಲ್ಲ. ನಾನು ತಹಶೀಲ್ದಾರವರ ಕಛೇರಿಯಲ್ಲಿ ಪಹಣಿ ವಿಭಾವದಲ್ಲಿ ಕೆಲಸ ಮಾಡುತ್ತಿದ್ದ ಕಾರಣ ದಾವಾ ಜಮೀನು ನನ್ನ ಹೆಸರಿಗೆ ವರ್ಗಾವಣೆ ಮಾಡಿ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ವರ್ಗಾವಣೆ ಮಾಡಿಕೊಂಡು ನನ್ನ ಅತ್ತೆ ಮಾವ ನನಗೆ ಕೇಳಿದರು ಸಹ ವರ್ಗಾವಣೆ ಮಾಡಬಾರದು ಎಂಬ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನು ನನಗೆ ಸೇರಿರುವುದಿಲ್ಲ ಎಂದು ನನಗೆ ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾವ ನ್ಯಾಯಾಲಯಕ್ಕೆ ಬಂದರೇ ಸತ್ಯಾಂಶ ಬರುತ್ತದೆ ಎಂದು ಗೊತ್ತಿದ್ದು ಆದ್ದರಿಂದ ನನ್ನ ಮಾವನಿಗೆ ಮುಚ್ಚಿಟ್ಟು ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮಾವ ಬಂದರೇ ಎಲ್ಲಾ ಸರಿಯಾಗುತ್ತದೆ ಎಂದು ನುಡಿಯುತ್ತಾರೆ.

ದಾವಾ ಜಮೀನನ್ನು ನಾನು ನೋಡಿದ್ದೇನೆ. ಸದರಿ ಜಮೀನು ತಾಂಡಗೆ ಹತ್ತಿಕೊಂಡು ಇದ್ದು ಫಲವತ್ತತ್ತೆಯ ಜಮೀನು ಇರುವುದಿಲ್ಲ ಎಂದರೆ ಸಾಕ್ಷಿ ಅದರಲ್ಲಿ ನಾವು ತೊಗರಿ ಬಿತ್ತುತ್ತಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಜಮೀನಿನ ಪಕ್ಕದಲ್ಲಿ ಮನೆಗಳು ಹಾಗೂ ದೇವಸ್ಥಾನ ಇದೆ ಎಂದರೆ ಸರಿ.

1 ನೇ ಪ್ರತಿವಾದಿ ದಾವಾ ಜಮೀನಿನಲ್ಲಿ ನಿವೇಶಗಳನ್ನು ಮಾಡಿ ಸೀತಾಬಾಯಿ, ಜಾನು, ವಿಮಲಿಬಾಯಿ, ಪ್ರಭು ಹೀಗೆ ಸುಮಾರು ಜನರಿಗೆ ಮಾರಾಟ ಮಾಡಿದ್ದಾನೆ ಎಂದರೆ ಸಾಕ್ಷಿ ನಮಗೆ ಭಯ ಪಡಿಸಿ ನಿವೇಶನಗಳನ್ನು ಮಾಡಿ ಮಾರಾಟ ಮಾಡಿದ್ದಾರೆ ನಂತರ ನಮಗೆ ಗೊತ್ತಾಗಿ ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಖರೀದಿ ಮಾಡಿದವರು ಸದರಿ ದಾವಾ ಜಮೀನಿನಲ್ಲಿ ಬೇಸಮೆಂಟ ನಿರ್ಮಾಣ ಮಾಡಿದ್ದಾರೆ ಎಂದರೆ ಸಾಕ್ಷಿ ಪ್ರಭು ಎಂಬ ವ್ಯಕ್ತಿ ನಿರ್ಮಾಣ ಮಾಡಿದ್ದು ಉಳಿದವರು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ವ್ಯಕ್ತಿಗಳು ಬೇಸಮೆಂಟ ನಿರ್ಮಾಣ ಮಾಡಿ ಕಬ್ಜದಲ್ಲಿ ಇದ್ದಾರೆ ಎಂದರೆ ಸರಿ. ಮೇಲೆ ಹೇಳಿದ ವ್ಯಕ್ತಿಗಳ ವಿರುದ್ದ ನಾನು ದಾವೆಯನ್ನು ಸಲ್ಲಿಸಿಲ್ಲ. ಮೇಲೆ ಹೇಳಿರುವ ವ್ಯಕ್ತಿಗಳು ಕಬ್ಜದಲ್ಲಿ ಇರುವ ಬಗ್ಗೆ ದಾವೆ ಹೂಡುವ ಸಮಯಕ್ಕೆ ಗೊತ್ತಿತ್ತಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅತ್ತೆ ಅದೇ ತಾಂಡದಲ್ಲಿ ವಾಸವಿದ್ದರು ಎಂದರೆ ಸಾಕ್ಷಿ 6 ತಿಂಗಳವರೆಗೆ ಇದ್ದು ನಂತರ ನಮ್ಮ ಮನೆಗೆ ಕರೆದುಕೊಂಡು ಬಂದಿದ್ದೇವೆ ಎಂದು ನುಡಿಯುತ್ತಾರೆ. ಸದರಿ ತಾಂಡದಲ್ಲಿ ಮನೆ ಇದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಇದೆ ಆದರೆ ಬಿದ್ದು ಹೋಗಿದೆ ಎಂದು ನುಡಿಯುತ್ತಾರೆ.

ನನ್ನ ಅತ್ತೆಗೆ ಹಾಗೂ ನನಗೆ ದಾವಾ ಜಮೀನಿನಲ್ಲಿ ಮೇಲೆ ಹೇಳಿದ ವ್ಯಕ್ತಿಗಳು ಕಬ್ಜದಲ್ಲಿ ಇರುವ ಬಗ್ಗೆ ಗೊತ್ತಿದ್ದು ಸಹ ಪಹಣಿ ಪತ್ರಿಕೆಯಲ್ಲಿರುವ ನನ್ನ ಹೆಸರನ್ನು ದೂರಪಯೋಗಿಸಿ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

**(ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು).**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**